(ಎ) ಸರ್ಕಾರಿ ಕಾಲೇಜು ಮಂಜೂರಾದ ತಕ್ಷಣ ಅನುದಾನ ಬಗ್ಗೆ.

ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ (ಕುಂದಾಪುರ):- ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರಾದ ವಸಂತ ವಿ. ಸಾಲಿಯಾನರವರು ಕೇಳಿರತಕ್ಕಂಥ ಪ್ರಶ್ನೆ. ಪ್ರಥಮ ದರ್ಜೆ ಕಾಲೇಜು ಪ್ರಾರಂಭವಾಗಿ ಒಂಭತ್ತು ವರ್ಷವಾದರೂ ಕೂಡ ನೂತನ ಕಟ್ಟಡಕ್ಕೆ ಮಂಜೂರಾತಿ ಕೊಟ್ಟಿಲ್ಲ. ಕಳೆದ ಸಾರಿ ಮಂಜೂರಾತಿ ಕೊಟ್ಟು, ಟೆಂಡರ್ ಆದಮೇಲೆಗ್ರ್ರಾಂಟ್‌ನ್ನು ವಾಪಸು ಪಡೆದುಕೊಂಡಿದ್ದೀರಿ. ಈ ವ್ಯವಸ್ಥೆ ಸರಿಯಲ್ಲ. ಎರಡು ಜೂನಿಯರ್ ಕಾಲೇಜು ಇವೆ, ಇದಕ್ಕೂ ಸಹ ಯಾವುದೇ ಕೊಠಡಿ ಮಾಡಿಸಿ ಕೊಟ್ಟಿಲ್ಲ. ಇದನ್ನು ನಾವು ಕೇಳಿ ಆದಮೇಲೆ ನೀವು ಕೊಡತಕ್ಕದಲ್ಲ, ಕಾಲೇಜು ಮಂಜೂರಾದ ತಕ್ಷಣ ಅದಕ್ಕೆ ಬೇಕಾದ ಕೊಠಡಿಗಳನ್ನು ಮಂಜೂರು ಮಾಡುವುದು ಮತ್ತು ಅನುದಾನದ ವ್ಯವಸ್ಥೆಯನ್ನು ಮಾಡತಕ್ಕಂಥದ್ದು ತಮ್ಮ ಜವಾಬ್ದಾರಿ ಆಗಿರುತ್ತದೆ. ಈ ವರ್ಷ ಆದ್ಯತೆಯ ಮೇರೆಗೆ ತೆಗೆದುಕೊಳ್ಳುತ್ತೀರೆಂದು ತಮ್ಮ ಮುಖಾಂತರ ಕೇಳಲಿಕ್ಕೆ ಇಚ್ಛಿಪಡುತ್ತೇನೆ.

(ಏ) ವಿರಾಜಪೇಟೆಯಲ್ಲಿ ಅಮಾಯಕರ ಮೇಲೆ ಹೊಡಿರುವ ಮೊಕದ್ದಮೆಗಳನ್ನು ವಾಪಸ್ಸು ಪಡೆಯುವುದು;

ಶ್ರೀ ಹೆಚ್.ಡಿ. ಬಸವರಾಜ್(ವಿರಾಜಪೇಟೆ):- ಸನ್ಮಾನ್ಯ ಅಧ್ಯಕ್ಷರೆ, ವಿರಾಜಪೇಟೆ ನಗರದಲ್ಲಿ ಡಿಸೆಂಬರ್ ತಿಂಗಳಿನಲ್ಲಿ ನಡೆದ ಗಲಭೆಯಲ್ಲಿ ಅಮಾಯಕರನ್ನು ಬಂಧಿಸುವಂತಹ ಒಂದು ವ್ಯವಸ್ಥೆ ಮಾಡಿ ಅವರ ಮೇಲೆ ಹಲವಾರು ಮೊಕದ್ದಮೆಗಳನ್ನು ಹಾಕಿದ್ದಾರೆ. ಈ ಸಂದರ್ಭದಲ್ಲಿ ತಮ್ಮ ಮೂಲಕ ಒತ್ತಾಯ ಮಾಡುವುದೇನೆಂದರೆ, ಈ ಅಮಾಯಕರು ಗಲಭೆಯಲ್ಲಿ ಭಾಗವಹಿಸಿದೆ ಇದ್ದರೂ, ಕೇವಲ ಒಂದು ವರದಿಯ ಮೂಲಕ ಪೊಲೀಸ್‌ನವರು ತಮ್ಮ ಠಾಣೆಯಲ್ಲಿ ಕುಳಿತುಕೊಂಡು ಅವರ ಮೇಲೆ ಮೊಕದ್ದಮೆಗಳನ್ನು ಬರೆಸಿ ಇವರ ಮೇಲೆ ಕೇಸ್‌ಗಳನ್ನು ಹಾಕಿದ್ದಾರೆ. ಈ ಆಪಾದಿತ ವ್ಯಕ್ತಿಗಳು ನೇರವಾಗಿ ಭಾಗವಹಿಸದೆ ಇರುವುದರಿಂದ ಅವರ ಮೇಲಿರುವ ಎಲ್ಲಾ ಮೊಕದ್ದಮ್ಮೆಗಳನ್ನು ವಾಪಸ್ಸು ಪಡೆಯಬೇಕೆಂದು ತಮ್ಮ ಮುಖಾಂತರ ಒತ್ತಾಯ ಮಾಡುತ್ತೇನೆ.

(ಐ) ಶಾಸಕರ ಮೇಲೆ ಹಾಕಿರುವ ಕೇಸುಗಳ ಬಗ್ಗೆ

ಶ್ರೀಮತಿ ಪ್ರಮೀಳಾ ನೇಸರ್ಗಿ(ಚಾಮರಾಜಪೇಟೆ):- ಸನ್ಮಾನ್ಯ ಅಧ್ಯಕ್ಷರೆ, ನನ್ನ ಮೇಲೆ ಬಹಳಷ್ಟು ಕೇಸ್‌ಗಳು ಇವೆ. ಆದರೆ ಕೇಸ್‌ಗಳನ್ನು ವಾಪಸ್ಸು ತೆಗೆದುಕೊಳ್ಳಿ ಎಂದು ನಾನು ಕೇಳಿಕೊಳ್ಳುವುದಿಲ್ಲ. ಏಕೆಂದರೆ ನಾನು ಡಿಫೆಂಡ್ ಮಾಡಿಕೊಳ್ಳುತ್ತೇನೆ. ಇನ್ನು ನೂರಾರು ಕೇಸ್‌ಗಳನ್ನು ಹಾಕಿ. ಈ ಎಲ್ಲಾ ಕೇಸ್‌ಗಳನ್ನು ಗೆದ್ದು ಸರ್ಕಾರದ ವತಿಯಿಂದ ಎಷ್ಟು ಡ್ಯಾಮೇಜ್ ತೆಗೆದುಕೊಳ್ಳಬೇಕು ಅಷ್ಟನ್ನು ತೆಗೆದುಕೊಳ್ಳುತ್ತೇನೆಂದು ತಮ್ಮ ಮೂಲಕ ಹೇಳಬಯಸುತ್ತೇನೆ.

ಶ್ರೀ ಎಂ. ಸಿ. ನಾಣಯ್ಯ (ಕಾನೂನು ಮತ್ತು ಸಂಸದೀಯ ವ್ಯವಹಾರ, ವಾರ್ತಾ ಮತ್ತು ಪ್ರಚಾರ ಸಚಿವರು):- ಮಾನ್ಯ ಅಧ್ಯಕ್ಷರೆ, ಶ್ರೀಮತಿ ಪ್ರಮೀಳ ನೇಸರ್ಗಿ ಅವರ ಮೇಲೆ ಸಂಬಂಧಪಟ್ಟ ಹಾಗೆ ಕೇಸ್‌ಗಳನ್ನು ವಾಪಸು ಪಡೆದುಕೊಳ್ಳಬಾರದೆಂದು ಹೇಳಿದ್ದಾರೆ. ಸರ್ಕಾರದ ವತಿಯಿಂದ ಡ್ಯಾಮೇಜ್‌ನ್ನು ವಸೂಲಾತಿ ಮಾಡುತ್ತೇನೆಂದು ಹೇಳಿದ್ದೀರಿ, ಬಹುಶ: ಈ ಸವಾಲನ್ನು

ಸರ್ಕಾರ ಸ್ವೀಕಾರ ಮಾಡುತ್ತದೆ. ಬಾಕಿ ಇರತಕ್ಕಂಥ ವಿಚಾರಗಳಿಗೆ ಸಂಬಂಧಪಟ್ಟ ಹಾಗೆ, ಕೆಲವು ಘಟನೆಗಳು ಆಗುತ್ತಿರುವುದನ್ನು ನಾನು ಒಪ್ಪಿಕೊಳ್ಳುತ್ತೇನೆ. ಕೋಲಾರದಲ್ಲಿ ಹಾಲಿನ ದರ ಹೆಚ್ಚಾದಾಗ ಗಲಾಟೆ ಆಯಿತು, ನಾವು ಆ ಮೊಕದ್ದಮೆಗಳನ್ನು ಹಿಂದಕ್ಕೆ ಪಡೆದುಕೊಂಡಿದ್ದೇವೆ. ಅಂಗನವಾಡಿ ಕೆಲಸಗಾರರು ಸಂಬಳ ಹೆಚ್ಚು ಮಾಡಬೇಕೆಂದು ಅವರು ಪ್ರತಿಭಟನೆ ಮಾಡತಕ್ಕಂಥ ಸಂದರ್ಭದಲ್ಲಿ ಹಾಕಿದ ಕೇಸ್‌ನ್ನು ಹಿಂದಕ್ಕೆ ಪಡೆದುಕೊಂಡಿದ್ದೇವೆ. ಆದರೆ ಕೆಲವು ಸಂದರ್ಭದಲ್ಲಿ ಸಾರ್ವಜನಿಕವಾಗಿರತಕ್ಕಂಥ ಕೆಲವು ಪ್ರತಿಭಟನೆಗಳು ಬಂದಾಗ, ಎಲ್ಲೆಲ್ಲಿ ಅಂದರೆ ಕೆಲವು ಸಂದರ್ಭದಲ್ಲಿ ಅಂಗಡಿಗಳಿಗೆ ಬೆಂಕಿ ಹಚ್ಚುವಾಗ ಮತ್ತು ದರೋಡೆ ಮಾಡುವಾಗ, ಲೂಟಿ ಆಗಿರುವ ಪ್ರಕರಣಗಳು ಬಂದಾಗ, ಅದರಲ್ಲಿ ನೇರವಾಗಿ ಭಾಗಿಯಾಗಿರುತ್ತಾರೆ, ಅಂಥ ಪ್ರಕರಣಗಳನ್ನು ಹಿಂದಕ್ಕೆ ತೆಗೆದುಕೊಳ್ಳುವುದಕ್ಕೆ ಖಂಡಿತ ಆಗುವುದಿಲ್ಲ. ಕಾವೇರಿಗೆ ಸಂಬಂಧಪಟ್ಟ ಪ್ರಕರಣಗಳನ್ನು ತಾವು ಹೇಳಿದ್ದೀರಿ, ಆದರೆ ಈ ಸಂದರ್ಭದಲ್ಲಿ ಅಂಗಡಿ ಮುಂಗಂಟ್ಟುಗಳನ್ನು ಸಂಪೂರ್ಣವಾಗಿ ನಾಶ ಮಾಡಿದ್ದಾರೆ, ಬೆಂಕಿ ಹಚ್ಚಿದ್ದಾರೆ, ಕೆಲವು ವಾಹನಗಳನ್ನು ಸುಟ್ಟು ಹಾಕಿರುವ ಪ್ರಕರಣಗಳು ಇವೆ. ಇದರಲ್ಲಿ ನೇರವಾಗಿ ಭಾಗಿಯಾಗಿರುವವರನ್ನು ಕೆಲವು ಸಂದರ್ಭದಲ್ಲಿ ಹಿಂದಕ್ಕೆ ತೆಗೆದುಕೊಳ್ಳುವುದಕ್ಕೆ ಕಷ್ಟವಾಗುತ್ತದೆ. ಕಾಂಪನ್‌ಸೇಷನ್ ಕೊಡಬೇಕೆಂದು ಹೇಳತಕ್ಕಂಥ ಮೊಕದ್ದಮೆ ಸುಪ್ರೀಕೋರ್ಟಿನಲ್ಲಿ ಇರುವುದರಿಂದ ಮತ್ತು ಬೆಂಗಳೂರಿನಲ್ಲಿ ನಡೆದಿರತಕ್ಕಂಥ ಈ ಘಟನೆಗಳಿಗೆ ಸಂಬಂಧಪಟ್ಟ ಹಾಗೆ ತಾವು ಯಾವುದೇ ಮೊಕದ್ದಮೆಯನ್ನು ಹಿಂದಕ್ಕೆ ಪಡೆಯಲಿಲ್ಲ. ಆದರೆ ಮೈಸೂರಿನಲ್ಲಿ ಕಾವೇರಿಗೆ ಸಂಬಂಧಪಟ್ಟಂತೆ ಪ್ರತಿದಿನ ಪ್ರತಿಭಟನೆಯನ್ನು ಅವರು ಮಾಡುತ್ತಿದ್ದರು. ಆ ಎಲ್ಲಾ ಪ್ರಕರಣಗಳನ್ನು ನಾವು ಹಿಂದಕ್ಕೆ ಪಡೆದಿದ್ದೇವೆ. ಇನ್ನು ಕೆಲವು ಸಂದರ್ಭದಲ್ಲಿ ಸರ್ಕಾರದ ನೀತಿಯ ವಿರುದ್ದ ಕೆಲವು ಧುರೀಣರು ಸೇರಿ ಪ್ರತಿಭಟನೆ ಮಾಡಿದ್ದಾರೆ.

ಶ್ರೀ ಹೆಚ್. ಸಿ. ಶಂಕರಲಿಂಗೇಗೌಡ:- ಆ ರೀತಿ ಯಾವುದನ್ನೂ ಹಿಂದಕ್ಕೆ ತೆಗೆದುಕೊಂಡಿಲ್ಲ. ತಾವು ತಪ್ಪು ಮಾಹಿತಿಯನ್ನು ಕೊಡಬಾರದು.

ಶ್ರೀ ಎಂ. ಸಿ. ನಾಣಯ್ಯ:- ಮೊನ್ನೆ ಸುಮಾರು 126 ಕೇಸುಗಳನ್ನು ಹಿಂದಕ್ಕೆ ತೆಗೆದುಕೊಂಡಿದ್ದೇವೆ. ನಿಮ್ಮ ಮೇಲೆ ಆಗಿರುವ ಕೇಸಿನ ಬಗ್ಗೆ ಗೊತ್ತಿಲ್ಲ. ಸರ್ಕಾರದ ವತಿಯಿಂದ ಅಧಿಕೃತವಾಗಿ ಉತ್ತರ ಕೊಡುತ್ತಿದ್ದೇನೆ. ನಾನೇ ಆ ಕೆಲಸವನ್ನು ಮಾಡಿದ್ದೇನೆ. ನಿಮ್ಮ ಮೇಲಿರುವ ಪ್ರಕರಣದ ಬಗ್ಗೆ ಹಿಂದಕ್ಕೆ ತೆಗೆದುಕೊಂಡಿದ್ದೇವೊ ನನಗೆ ಗೊತ್ತಿಲ್ಲ. ಆದ್ದರಿಂದ ತಪ್ಪು ಮಾಹಿತಿಯೆಂದು ಹೇಳಬೇಡಿ. ನಾನು ಜವಾಬ್ದಾರಿಯಿಂದ ಮಾತನಾಡುತ್ತಿದ್ದೇನೆ. ಅಂಥ ಪ್ರಕರಣದ ಬಗ್ಗೆ ಹಿಂದಕ್ಕೆ ಪಡೆಯಲಾಗಿದೆ. ಸೆಕ್ಷನ್ 34,144 ರ ಉಲ್ಲಂಘನೆ ಮಾಡಿರುತ್ತಾರೆ. ಅನಂತರ ಅದರ ಮೇಲೆ ಕೇಸ್‌ನ್ನು ಹಾಕುತ್ತಾರೆ. ಹಾಕಿರುವ ಕೇಸನ್ನು ಹಿಂದಕ್ಕೆ ಪಡೆಯಬೇಕೆಂದು ಕೇಸನ್ನು ಹಾಕುತ್ತಾರೆ. ಇಂಥ ಯಾವುದೇ ಪ್ರಕರಣಗಳಿದ್ದರೂ ಸಹ ಹಿಂದಕ್ಕೆ ಪಡೆದಿರುತ್ತೇವೆ. ಮಾನ್ಯ ಈಶ್ವರಪ್ಪನವರು ಹೇಳಿರುವ ಶಿವಮೊಗ್ಗದ ವಿಚಾರದ ಬಗ್ಗೆ ನನಗೆ ಗೊತ್ತಿಲ್ಲ. ಅಲ್ಲಿ ಗಣಪತಿಯನ್ನು ಮೆರಗಣಿಗೆಯಲ್ಲಿ ತೆಗೆದುಕೊಂಡು ಹೋಗಿದ್ದಾರೆ. ಆಗ ಘಟನೆಯಾಗಿದೆ. ದೇವರನ್ನು ಗುಡಿಯಲ್ಲೇ ಇಟ್ಟಿದ್ದರೆ ಯಾವುದೇ ತೊಂದರೆಯಾಗುವುದಿಲ್ಲ. ಮುಸಲ್ಮಾನರ ದೇವರಾಗಲಿ, ಹಿಂದುಗಳ ದೇವರಾಗಲಿ ಹೊರಗಡೆ ಬಂದರೆ ತೊಂದರೆಗಳಾಗುತ್ತಿರತಕ್ಕದ್ದು. ಎಲ್ಲೋ ಅಲ್ಲಿ ಇಲ್ಲಿ ಬೆಂಕಿ ಹಚ್ಚತಕ್ಕದನ್ನು ನೋಡುತ್ತಿದ್ದೇವೆ. ಆದ್ದರಿಂದ ದೇವರುಗಳನ್ನು ಹೊರಗಡೆ ತರದಿದ್ದರೆ ಬಹಳ ಶಾಂತಿ ಮತ್ತು ನೆಮ್ಮದಿಯ ಸ್ಥಿತಿ

ನಿರ್ಮಾಣವಾಗುತ್ತದೆ. ಎಲ್ಲಿ ದೊಂಬಿಯ ಪ್ರಕರಣವಿಲ್ಲ, ಬೆಂಕಿ ಹಾಕುವ ಪ್ರಕರಣವಿಲ್ಲ, ಎಲ್ಲಿ ಲೂಟಿಯಿಲ್ಲ ಅಂಥ ಪ್ರಕರಣಗಳನ್ನು ಬಿಟ್ಟು ಬಾಕಿ ಇರುವ ಪ್ರಕರಣಗಳಿಗೆ ಸಂಬಂಧಪಟ್ಟಂತೆ ಇರುವುದನ್ನು ಹಿಂದಕ್ಕೆ ಪಡೆಯುವುದಾಗಿ ಭರವಸೆಯನ್ನು ಕೊಡುತ್ತೇನೆ. ತಮಗೆ ಗೊತ್ತಿರಬಹುದು, 1996ರಲ್ಲಿ ಇಂಥ 42 ಸಾವಿರ ಪ್ರಕರಣಗಳನ್ನು ನಾವು ಹಿಂದಕ್ಕೆ ಪಡೆದಿದ್ದೇವೆ. ಅದು ಹತ್ತಾರು ವರ್ಷಗಳಿಂದ ನೆನೆಗುದಿಗೆ ಬಿದ್ದಿ ಇತ್ತು, ಆಗ ನಾನೇ ಒಂದು ಸಭೆ ಮಾಡಿ 42ಸಾವಿರ ಪ್ರಕರಣಗಳನ್ನು ಹಿಂದಕ್ಕೆ ಪಡೆದಿದ್ದೇನೆ. ಅಲ್ಲಿಂದ ಇಲ್ಲಿಯವರೆಗೆ ಮತ್ತೆ 50-60 ಇಂಥ ಪ್ರಕರಣಗಳನ್ನು ಹಿಂದಕ್ಕೆ ಪಡೆದಿದ್ದೇನೆ. ಕೆಲವು ಸಂದರ್ಭಗಳಲ್ಲಿ ಅಟೆಮ್ಪ್ಟ್ ಟು ಮರ್ಡರ್, ಚೂರಿಯನ್ನು ಹಾಕಿರತಕ್ಕ ಪ್ರಕರಣಗಳೂ ಸಹ ಇವೆ. ಆ ಸಂದರ್ಭದಲ್ಲಿ ಅಮಾಯಕರೂ ಸಹ ಇದ್ದಿರಬಹುದು. ಆದರೆ ಅದರಲ್ಲಿ ಯಾರ್ಯಾರು ನೇರವಾಗಿ ಭಾಗಿಗಳಾಗಿರುತ್ತಾರೆ ಅದನ್ನು ಹಿಂದಕ್ಕೆ ತೆಗೆಯಲು ಆಗುವುದಿಲ್ಲ. ಬಾಕಿ ಪ್ರಸಂಗಗಳಲ್ಲಿ ಇಲಾಖೆಯ ಅಧಿಕಾರಿಗಳೊಂದಿಗೆ ಚರ್ಚೆ ಮಾಡಿ, ಡಿ.ಜಿ.ಪಿ. ಯವರೊಂದಿಗೆ ಚರ್ಚೆ ಮಾಡಿ, ಹಿಂದಕ್ಕೆ ತೆಗೆದುಕೊಳ್ಳುವ ಆಶ್ವಾಸನೆ ಕೊಡುತ್ತೇನೆ. ಮಾನ್ಯ ಬಸವರಾಜ್‌ರವರು ವೀರಾಜಪೇಟೆಗೆ ಸಂಬಂಧಪಟ್ಟಂತೆ ಒಂದು ಪ್ರಕರಣದ ಬಗ್ಗೆ ಹೇಳಿದರು. ದೊಂಬಿ, ಗಲಭೆ, ಲೂಟಿ ಮಾಡಿದಾಗ ಎರಡುಮೂರು ಸಾವಿರ ಜನರಿರುತ್ತಾರೆ, ಅದರಲ್ಲಿ 50-60-ಜನರು ಅಮಾಯಕರು ಇರುತ್ತಾರೆ. ವಿಚಾರಣೆ ಮಾಡತಕ್ಕ ಸಂದರ್ಭದಲ್ಲಿ ಯಾರು ಭಾಗಿಗಳಾಗಿರುವುದಿಲ್ಲ, ಯಾರು ಇದರಲ್ಲಿ ಗುರುತರವಾಗಿ ಪಾಲುಗೊಂಡಿರುವುದಿಲ್ಲ ಅಂಥವರ ಬಗ್ಗೆ ಮತ್ತು ಸಾರ್ವಜನಿಕವಾಗಿ ಕೆಲವು ಸಂದರ್ಭಗಳಲ್ಲಿ ಸಮಾಜಸೇವೆ ಮಾಡತಕ್ಕಂಥ ಪ್ರಕರಣಗಳ ಬಗ್ಗೆ ಗೃಹ ಕಾರ್ಯದರ್ಶಿಯವರನ್ನು ನನ್ನ ಇಲಾಖೆಯ ಕಾರ್ಯದರ್ಶಿಯವರನ್ನು ಡಿ.ಜಿ.ಪಿ.ಯವರನ್ನು ಕರೆದು ಸಭೆ ಮಾಡಿ ಕ್ರಮ ತೆಗೆದುಕೊಳ್ಳುತ್ತೇನೆ. ಇನ್ನು ಸತ್ಯಾಗ್ರಹಕ್ಕೆ ಸಂಬಂಧಪಟ್ಟಂತೆ ಮಾನ್ಯ ವಾಟಾಳ್ ನಾಗರಾಜ್‌ರವರು ಪ್ರಸ್ತಾಪ ಮಾಡಿದರು. ತಾವು ಅಧಿಕೃತವಾಗಿ ಸರ್ಕಾರಕ್ಕೆ ಮನವಿಯನ್ನು ಸಲ್ಲಿಸಿದರೆ, ಆ ಜಾಗ ಯಾವುದು ಇದೆ ಅದನ್ನು ತೀರ್ಮಾನ ಮಾಡಿ ಅದಕ್ಕೆ ಖಾತೆಯನ್ನು ಕೊಡುವ ಬಗ್ಗೆ ಸಹ ಪರಿಶೀಲನೆ ಮಾಡುತ್ತೇನೆ.

ಶ್ರೀ ಹೆಚ್. ಜಿ. ಗೋವಿಂದೇಗೌಡ (ಶಿಕ್ಷಣ ಸಚಿವರು): ಮಾನ್ಯ ಅಧ್ಯಕ್ಷರೆ, ಮಾನ್ಯ ವಸಂತಸಾಲಿಯಾನರವರು ಹೇಳಿರುವ ವಿಚಾರದ ಬಗ್ಗೆ ಹೇಳುವುದಾದರೆ, ಕಾಪು ಕ್ಷೇತ್ರದಲ್ಲಿ ಪದವಿ ಕಾಲೇಜು ಕಟ್ಟಡ ಇಲ್ಲವೆಂದು ಹೇಳಿದ್ದಾರೆ. ಅದು ನಿಜ. 1992-93ನೇ ಸಾಲಿನಲ್ಲಿ ಈ ಕಾಲೇಜನ್ನು ಪ್ರಾರಂಭ ಮಾಡಿದರು. ಆದರೆ ಕಟ್ಟಡವನ್ನು ಕಟ್ಟಿಸಲು ಹಣವನ್ನು ಒದಗಿಸಿರಲಿಲ್ಲ. 96-97ರಲ್ಲಿ 4 ಲಕ್ಷವನ್ನು ಒದಗಿಸಿದರು, ಆದರೆ ಅದು ಮೂರನೇ ಒಂದರಷ್ಟು ಇಲ್ಲವೆಂದು ಇಲಾಖೆಯವರು ಟೆಂಡರ್ ಕೆಲಸವನ್ನು ಮಾಡಲಿಲ್ಲ. ಮತ್ತೆ ಕೇವಲ 20 ಸಾವಿರ ಹಣವನ್ನು ಮಾತ್ರ ಇಟ್ಟರು. 1997-98ನೇ ಸಾಲಿನಲ್ಲಿ ಪದವಿಪೂರ್ವ ಕಾಲೇಜುಗಳ ಕಟ್ಟಡಗಳನ್ನು ಒಟ್ಟು 50 ಲಕ್ಷ ರೂಪಾಯಿಗಳನ್ನು ಇಟ್ಟಿದ್ದರಿಂದ ಅದರಲ್ಲಿ ಅನೇಕ ಕಾಮಗಾರಿಗಳನ್ನು ಮಾಡಿಸಲು ಆಗಲಿಲ್ಲ. ಈ ವರ್ಷ ಇದರ ಅನುಭವ ನನಗಾಗಿದೆ, ಸರ್ಕಾರದ ಗಮನಕ್ಕೂ ಇದು ಬಂದಿದೆ, ಈ ರೀತಿ 50,20 ಸಾವಿರ ರೂಪಾಯಿಗಳನ್ನು ಕಟ್ಟಡಕ್ಕೆ ಕೊಟ್ಟರೆ ಪ್ರಯೋಜನವಾಗುವುದಿಲ್ಲವೆಂದು ಹಣಕಾಸು ಸಚಿವರ ಜೊತೆ ಚರ್ಚೆ ಮಾಡಿದ್ದೇನೆ.

ಶ್ರೀ ಕಾಗೋಡು ತಿಮ್ಮಪ್ಪ:- ನಮ್ಮ ಸರ್ಕಾರವಿದ್ದಾಗ ಯಾವುದೇ ಕಟ್ಟಡಕ್ಕೆ ಮೂರನೇ ಒಂದರಷ್ಟು ಹಣವನ್ನು ಒದಗಿಸದೆಯೇ ಮಂಜೂರು ಮಾಡಿರುವ ಯಾವುದಾದರೊಂದು ಪ್ರಕರಣದ ಬಗ್ಗೆ ತೋರಿಸಿಬಿಡಿ?

ಶ್ರೀ ಹೆಚ್.ಜಿ. ಗೋವಿಂದೇಗೌಡ:- ಮಾನ್ಯ ಅಧ್ಯಕ್ಷರೆ, ಅದನ್ನು ಬೇಕಾದರೆ ತಮಗೆ ತೋರಿಸುತ್ತೇನೆ. ಯಾರನ್ನೂ ಚುಚ್ಚಿ ಮಾತನಾಡುವ ಅಭ್ಯಾಸ ನನಗಿಲ್ಲ. ಅವಶ್ಯಕತೆಯಿದೆಯೆಂದು ತಾವು ಹೇಳುವುದಾದರೆ ಬೇಕಾದಷ್ಟು ದಾಖಲೆಗಳು ಇದೆ ತರಿಸಿಕೊಡುತ್ತೇನೆ. 1992-93ರಲ್ಲಿ ಎಷ್ಟೆಷ್ಟು ಹಣವನ್ನು ಕೊಟ್ಟಿದ್ದೀರಿ ಎಂಬ ದಾಖಲೆಗಳು ಇದೆ. ಬೇಕಾದರೆ ಕೊಡುತ್ತೇನೆ. ದಯವಿಟ್ಟು ಕಟ್ಟಡಕ್ಕಾಗಿ ಹೆಚ್ಚು ಹಣವನ್ನು ಕೊಡಬೇಕು ಇಲ್ಲದಿದ್ದರೆ ಕೊಡುವುದೇ ಬೇಡವೆಂದು ಹಣಕಾಸು ಮಂತ್ರಿಗಳಿಗೆ ಹೇಳಿದ್ದೇನೆ. 50 ಲಕ್ಷ ಇಟ್ಟುಕೊಂಡು ಕೆಲಸ ಮಾಡುವುದಕ್ಕಾಗುವುದಿಲ್ಲವೆಂದು ಹೇಳಿದ್ದೇವೆ. ಅವರು ಅದನ್ನು ಒಪ್ಪಿಕೊಂಡಿದ್ದಾರೆ. ಹೆಚ್ಚು ಹಣವನ್ನು ಕೊಡುವುದಕ್ಕೆ ಭರವಸೆ ನೀಡಿದ್ದಾರೆ. ತಾವು ಇದನ್ನು ಅಭಿನಂದಿಸುವುದಿಲ್ಲವೇ?

ಶ್ರೀ ಕಾಗೋಡು ತಿಮ್ಮಪ್ಪ:- ತಮ್ಮನ್ನು ಅಭಿನಂದಿಸುವುದಕ್ಕೆ ಅಡ್ಡಿ ಇಲ್ಲ, ಆದರೆ ಅಲ್ಲಿ ಕಟ್ಟಡಗಳಿಗೆ ಸ್ಲ್ಯಾಬ್ ಹಾಕಿದ್ದಾರೆ, ಲಿಂಟಲ್ ಮಟ್ಟದಲ್ಲಿವೆ, ಎರಡು ವರ್ಷ ಎಕ್ಸ್‌ಪೋಸ್ ಆದರೆ ಆ ಕಟ್ಟಡದ ಗತಿಯೇನಾಗಬೇಕು? ಆದ್ದರಿಂದ ನಾನು ಇದರ ಬಗ್ಗೆ ಹೇಳುತ್ತಿರುವುದು.

ಶ್ರೀ ಹೆಚ್.ಜಿ. ಗೋವಿಂದೇಗೌಡ:- 1992ನೇ ಇಸವಿಯಿಂದಲೂ ಕಟ್ಟಡದ ಕೆಲಸ ಪ್ರಾರಂಭವಾಗಿದೆ. ಆ ಕಾಲದಲ್ಲಿ ಯಾರ ಸರ್ಕಾರವಿತ್ತು ಎಂಬುದು ತಮಗೆಲ್ಲಾ ತಿಳಿದೇ ಇದೆ. ಆವತ್ತಿನಿಂದಲೂ ಈ ಕಾರ್ಯಕ್ರಮ ನಡೆಯುತ್ತಿದೆ, ಆದರೆ ಅದರ ಬಗ್ಗೆ ಹೇಳಿಕೊಂಡುಹೋದರೆ ಪ್ರಯೋಜನವಿಲ್ಲ. ಆದ್ದರಿಂದ ಆದಷ್ಟು ಬೇಗನೆ ಕಟ್ಟಡಗಳನ್ನು ಕಟ್ಟಬೇಕು ಅದಕ್ಕೆ ಹೆಚ್ಚು ಹಣವನ್ನು ಒದಗಿಸಬೇಕೆಂದು ಹಣಕಾಸು ಸಚಿವರಿಗೆ ಹೇಳಿದ್ದೇನೆ. ಕಾಪುವಿನಲ್ಲಿನ ಮತ್ತು ತಮ್ಮಲ್ಲಿನ ಪದವಿಪೂರ್ವ ಕಾಲೇಜನ್ನು ಸಾಧ್ಯವಾದಷ್ಟು ಪ್ರಯತ್ನಮಾಡಿ ಮುಂದಿನ ವರ್ಷದಲ್ಲಿ ಬಜೆಟ್‌ನಲ್ಲಿ ಸೇರಿಸಿ ಪ್ರಾರಂಭ ಮಾಡುವುದಕ್ಕೆ ಪ್ರಯತ್ನ ಮಾಡುತ್ತೇನೆ.

ಶ್ರೀ ವಸಂತ ಏ ಸಾಲಿಯಾನ: 1992ರಿಂದಲೂ ಆ ಕಾಲೇಜು ದೇವಸ್ಥಾನದಲ್ಲಿ ನಡೆಯುತ್ತಿದೆ.

ಶ್ರೀ ಹೆಚ್.ಜಿ. ಗೋವಿಂದೇಗೌಡ:- ಅದು 1992ರಿಂದಲೂ ಅಲ್ಲಿ ನಡೆಯುತ್ತಿದೆ. ನಾನು ಬಂದ ಮೇಲೇನೂ ಅಲ್ಲಿ ನಡೆಯುತ್ತಿಲ್ಲವಲ್ಲಾ?

ಶ್ರೀ ವಸಂತ ಏ. ಸಾಲಿಯಾನ:- ನಾವು ನಮ್ಮ ಕಾಲದಲ್ಲಿ ಹತ್ತು ಲಕ್ಷ ಕೊಟ್ಟಿದ್ದೆವು. ಅದು ಮೂರನೇ ಒಂದರಷ್ಟು ಹಣವಾಗುವುದಿಲ್ಲವೇ? ಅದು ಮೂರು ಸಲ ಬಿದ್ದುಹೋಯಿತು. 1996, 1997ರಲ್ಲಿ ಬಿದ್ದುಹೋಯಿತು, ಈಗ 1998ರಲ್ಲಿ ಕೊಡಬೇಕಾಗಿದೆ.

ಶ್ರೀ ಹೆಚ್.ಜಿ. ಗೋವಿಂದೇಗೌಡ:- 1992ರಿಂದಲೂ ಈ ಕಾಲೇಜು ಪ್ರಾರಂಭವಾಗಿ ಅದಕ್ಕೆ ಹಣವಿಡದಿರುವುದರಿಂದ ಅಲ್ಲ ಕಟ್ಟಡದ ಕೆಲಸವಾಗಿಲ್ಲ. ಅದರ ಬಗ್ಗೆ ನಮಗೆ ಈಗಲೂ ಕಾಳಜಿ ಇದೆ. 1998-99ರಲ್ಲಿ ಇದಕ್ಕೆ ಹಣವನ್ನು ಒದಗಿಸಬೇಕೆಂದು ಹೇಳಿದ್ದೇನೆ. ಇನ್ನು ಹೊಸನಗರದಲ್ಲಿ

ಕಾಲೇಜು ಪ್ರಾಥಮಿಕ ಶಾಲೆಯ ಕಟ್ಟಡದಲ್ಲಿ ನಡೆಯುತ್ತಿದೆ. ಇಂಥ ಅನೇಕ ನಿದರ್ಶನಗಳಿವೆ. ದಯಮಾಡಿ ಮಾನ್ಯ ಸದಸ್ಯರು ಅಸಮಾಧಾನ ಮಾಡಿಕೊಳ್ಳಬಾರದಾಗಿ ವಿನಂತಿಸುತ್ತೇನೆ

4. ರಾಜ್ಯಪಾಲರ ವಂದನಾ ನಿರ್ಣಯದ ಮೇಲಿನ ಚರ್ಚೆ

+ಶ್ರೀ ಜೆ.ಸಿ. ಮಾಧುಸ್ವಾಮಿ (ಚಿಕ್ಕನಾಯಕನಹಳ್ಳಿ):- ಮಾನ್ಯ ಅಧ್ಯಕ್ಷರೆ, ರಾಜ್ಯಪಾಲರ ಭಾಷಣದ ಮೇಲೆ ಮಾತನಾಡುವಾಗ ನಾನು ಎರಡು ವರ್ಗವನ್ನು ಮಾಡಿಕೊಂಡು ಮಾತನಾಡುತ್ತೇನೆ, ಒಂದು ನನ್ನ ಕ್ಷೇತ್ರಕ್ಕೆ ಮತ್ತು ಜಿಲ್ಲೆಗೆ ಸಂಬಂಧಪಟ್ಟರತಕ್ಕದ್ದು. ಇದರ ಬಗ್ಗೆ ಬಹುಶ: ಎರಡನೇ ಬಾರಿ ಹೇಳಿದಂತಾಗುತ್ತದೆ. ತಮಗೆ ಗೊತ್ತಿರುವಹಾಗ ತುಮಕೂರು ಜಿಲ್ಲೆ ಮತ್ತು ಚಿಕ್ಕನಾಯಕನ ಹಳ್ಳಿಗೆ ಈ ಸಲ ಮಳೆಯೇ ಆಗಿಲ್ಲ. ಸರ್ಕಾರ ರೈತರ ನೆರವಿಗಾದರೂ ಕಡೆಯಪಕ್ಷ ಬರುತ್ತದೆಂದು ನಾವು ಬಹಳ ಆಸೆಯನ್ನಿಟ್ಟುಕೊಂಡಿದ್ದೆವು. ನನ್ನ ಕ್ಷೇತ್ರದ 200-250 ಹಳ್ಳಿಗಳಲ್ಲಿ ಕುಡಿಯುವ ನೀರಿನ ತೊಂದರೆಯಾಯಿತು. ಇದರ ಪರಿಹಾರಕ್ಕೆ ಅನೇಕ ಸಲ ಕೇಳಿಕೊಂಡೆವು. ಇನ್ನೂ 94 ಹಳ್ಳಿಗಳಲ್ಲಿ ಭಾರಿ ಕುಡಿಯುವ ನೀರಿನ ತೊಂದರೆ ಇದೆ. ಏನಾದರೂ ಮಾಡಿ ಸರ್ಕಾರದಲ್ಲಿ ಕೇಳಿಕೊಂಡರೂ ಸಹ ಇದುವರೆಗೆ ಸರ್ಕಾರದಿಂದ ಯಾವುದೇ ಪ್ರತಿಕ್ರಿಯೆಯನ್ನು ನಾವು ಪಡೆದಿಲ್ಲ. ರಾಜ್ಯಪಾಲರ ಭಾಷಣವನ್ನು ನೋಡಿದಾಗ ಅದರಲ್ಲಿ ಹೋದ ವರ್ಷದ ಸಾಧನೆ ಯಾಗಲಿ, ಮುಂದಿನ ವರ್ಷದ ಗುರಿಯಾಗಲಿ ಎಲ್ಲಾ ಪಟ್ಟಿ ಮಾಡಲೇ ಇಲ್ಲ ಈ ಸ್ಥಿತಿಯಲ್ಲಿ ಚುನಾವಣೆಯಾಗುವುದು ಬೇಡ, ಏನಾದರೂ ಹಳ್ಳಿಗಳ ಕೆಲಸವಾಗಲಿ ಎಂದು ನಾವೆಲ್ಲರೂ ಸರ್ಕಾರಕ್ಕೆ ಬೆಂಬಲವನ್ನು ಕೊಟ್ಟೆವು. ಆದರೆ ಇವರಿಗೆ ಸರ್ಕಾರದ ಇರುವಿಕೆಯ ಬಗ್ಗೆ ಅನುಮಾನವಾಗಿದೆಯೋ ಏನೋ; ಮುಂದಿನ ವರ್ಷದ ಗುರಿಯನ್ನು ನಿಗದಿಪಡಿಸಿಕೊಂಡಿಲ್ಲ. ನಮ್ಮ ಭಾಗದಲ್ಲಿ ಇಂದು ಕುಡಿಯುವ ನೀರಿಗೆ ಬಹಳ ತೊಂದರೆಯಾಗಿದೆ. ಸುಮಾರು 500 ಅಡಿಯ ಆಳದಲ್ಲಿನ ಭೂ ಗರ್ಭದಲ್ಲಿ ನೀರಿದೆ. ಈ ನೀರನ್ನು ಗ್ರಾಮೀಣ ಜನರಿಗೆ ಕನಿಷ್ಟ ಪಕ್ಷ ಕುಡಿಯುವ ನೀರಿಗಾಗಿ ಒದಗಿಸಬೇಕೆಂಬ ಕಳಕಳಿ ತಮ್ಮ ಸರ್ಕಾರಕ್ಕೆ ಇರುವುದಾದರೆ ತಕ್ಷಣ ಸಭೆಗಳನ್ನು ತರೆದು ರಾಜಕೀಯ ಮಾಡದೆಯೇ ತಕ್ಷಣ ಗ್ರಾಮೀಣ ಜನರಿಗೆ ಕುಡಿಯುವ ನೀರಿನ ವ್ಯವಸ್ಥೆ ಮಾಡಬೇಕು. ನನ್ನ ಕ್ಷೇತ್ರವಾದ ಚಿಕ್ಕನಾಯಕನ ಹಳ್ಳಿಯಲ್ಲಿ ಹತ್ತು, ಹದಿನೈದು ದಿವಸಕ್ಕೆ ಒಂದು ಸಾರಿ ನೀರನ್ನು ಬಿಡುತ್ತಿದ್ದಾರೆ. ಹೋದ ಸಲ ಇದರ ಬಗ್ಗೆ ಕೇಳಿದಾಗ ಸನ್ಮಾನ್ಯ ಪೌರಾಡಳಿತ ಸಚಿವರು ಹೇಮಾವತಿಯಿಂದ ಅಲ್ಲಿಗೆ ನೀರನ್ನು ಕೊಡುವುದಾಗಿ ಒಪ್ಪಿಕೊಂಡಿದ್ದರು ಆದರೆ ಈವರೆಗೆ ಆ ಕೆಲಸವಾಗಲಿಲ್ಲ. ಈ ವರ್ಷವಾದರೂ ನಮಗೆ ಹೇಮಾವತಿಯಿಂದ ನೀರನ್ನು ಕೊಡಬೇಕೆಂದು ನಾನು ಒತ್ತಾಯ ಮಾಡುತ್ತೇನೆ. ನಾನು ಮತ್ತು ತುಮಕೂರು ಶಾಸಕರು ಇದ್ದಂಥ ಸಭೆಯಲ್ಲಿ ಮಾನ್ಯ ಮುಖ್ಯಮಂತ್ರಿಯವರು ಬಹಳ ಆಸಕ್ತಿಯಿಂದ ನಮ್ಮ ಪರಿಸ್ಥಿತಿ ಬಗ್ಗೆ ಕೇಳಿದ್ದರು. ಇದಕ್ಕೆ ತಾತ್ಕಾಲಿಕ ಮತ್ತು ಶಾಶ್ವತ ಪರಿಹಾರವೆಂದು ಎರಡು ರೀತಿ ಮಾಡೋಣವೆಂದು ಅವರು ಅವತ್ತು ಹೇಳಿದ್ದರು. ತಾತ್ಕಾಲಿಕ ಪರಿಹಾರವೆಂದರೆ ಬೋರ್‌ನ್ನು ಕೊರೆಸಿಕೊಡುವುದು. ಆ ಬೋರ್‌ಗಳನ್ನು ಕೊರೆಸಿ ಹ್ಯಾಂಡ್ ಪಂಪ್‌ಗಳನ್ನು ಆಳವಡಿಸುವುದರಿಂದ ಇವತ್ತು ನಮಗೆ ಪ್ರಯೋಜನವಾಗುತ್ತಿಲ್ಲ. ನೂರು, ನೂರಾಐವತ್ತು ಅಡಿಯ ಕೆಳಗೆ ನೀರಿದ್ದರೆ ಹ್ಯಾಂಡೆಪಂಪನ್ನು ಒತ್ತಲು ಆಗುವುದಿಲ್ಲ ಆದ್ದರಿಂದ ಅದಕ್ಕೆ ವಿದ್ಯುತ್ ಯಂತ್ರವನ್ನು ಜೋಡಿಸಿ ಕೊಡಬೇಕೆಂದು ಹೇಳಿದ್ದೆವು, ಅದಕ್ಕೆ ಇದುವರೆಗೆ ಹಣವನ್ನು ಒದಗಿಸಿಲ್ಲ. ಆದ್ದರಿಂದ ತಾವೇನು ಬೋರ್‌ವೆಲ್‌ಗಳನ್ನು